## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು.

**ಸಿ.ಸಿ.ನಂಃ 4608/2024**

| | | |
|---|---|---|
| ಫಿರ್ಯಾದುದಾರರು | : | **ಆರ್. ನಾಗರಾಜ್**, 47 ವರ್ಷ,<br>ಬಿನ್ಃ ಲೇಟ್ ರಾಮಪ್ಪ,<br>ವಾಸಃ ನಂ.3342, ಹೊಸ ಎ.ಡಿ ಕಾಲೋನಿ,<br>ಮುಳಬಾಗಿಲು. |
| | ವಿರುದ್ಧ | |
| ಆರೋಪಿ | : | ಮಂಜುನಾಥ ಎನ್, 45 ವರ್ಷ,<br>ಬಿನ್ಃ ಲೇಟ್ ನಲ್ಲೂರು ನಾರಾಯಣಗೌಡ,<br>ವಾಸಃ ಕಾಮಾಕ್ಷಮ ದೇವಾಲಯದ ರಸ್ತೆ ಹಿಂಭಾಗ,<br>ಕೆ.ಬಿ.ಪಿ ರಸ್ತೆ, ಮುತ್ಯಾಲಪೇಟೆ,<br>ಮುಳಬಾಗಿಲು. |

### ದಂಡ ಪ್ರಕ್ರಿಯಾ ಸಂಹಿತೆ ಕಲಂ–251ರ ಪ್ರಕಾರ ಆರೋಪಣೆ

ಆರೋಪಿಯಾದ ನೀವು ಫಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಮೌಲ್ಯವುಳ್ಳ ಪ್ರತಿಫಲದ ಬಾಬ್ತು ಅವರಿಗೆ ಕೊಡಬೇಕಾಗಿರುವ ಹಣದ ಮರು–ಪಾವತಿಗಾಗಿ ಮುಳಬಾಗಿಲು ಶಾಖೆಯ ಕೆನರಾ ಬ್ಯಾಂಕಿನ ಮುಂದಿನ ದಿನಾಂಕ ನಮೂದಿಸಿದ ಚೆಕ್ ನಂ.060956, ದಿನಾಂಕಃ19.06.2024ರ ಚೆಕ್ಕನ್ನು ರೂ.1,50,000/– (ಒಂದು ಲಕ್ಷ ಐವತ್ತು ಸಾವಿರ ರೂಪಾಯಿ)ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ನಗದುಗೊಳಿಸಲು ಮುಳಬಾಗಿಲು ಶಾಖೆಯ ಬ್ಯಾಂಕ್ ಆಫ್ ಬರೋಡಾ ಇಲ್ಲಿಗೆ ಹಾಜರುಪಡಿಸಿದಾಗ ಸದರಿ ಚೆಕ್ಕು '**ಸಾಕಷ್ಟು ಹಣವಿಲ್ಲ**' ಎಂಬ ಕಾರಣಕ್ಕಾಗಿ ಅನಾದರಣಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿಃ08.07.2024ರಂದು ನಿಮಗೆ ನೋಟೀಸ್

ನೀಡಿ ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ, ನೀವು ಫಿರ್ಯಾದುದಾರರಿಗೆ ನಿಯಮಿತ ಅವಧಿಯಲ್ಲಿ ಹಣವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆಯ ಕಲಂ–138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಅಂತ ನಿಮ್ಮ ವಿರುದ್ಧ ಆರೋಪಣೆ ಹೊರಿಸಲಾಗಿದೆ.

ಪ್ರ:1 ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?
ಉಃ

ಪ್ರ:2 ಮೇಲಿನ ಆರೋಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉಃ

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ, ವಿವರಿಸಿ, ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

(**ಹರೀಶ್ ಜಿ.**)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮುಳಬಾಗಿಲು.

ದಿಃ**15.07.2025**

**ಆರೋಪಿಯ ಸಹಿ**